**ಓ.ಎಸ್. ನಂಃ 40/2018**

**ಡಿ.ಡಬ್ಲ್ಯೂಃ 1**

**ದಿನಾಂಕ 03.09.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿಯ ಪರ: ಶ್ರೀ.ಎ.ಪಿ. ವಕೀಲರಿಂದಃ</u>**

ಅಸಲು ದಾವೆ ಸಂಖ್ಯೆ 198/2018 ರ ಆದೇಶ ಪುಟದ, ವಾದ ಪತ್ರದ ತೀರ್ಪು ಮತ್ತು ಡಿಕ್ರಿಯ ದೃಢಿಕೃತ ನಕಲುಗಳನ್ನು ನಿಡಿ.1 ರಿಂದ 4 ಎಂದು, ಅಮಲುಜಾರಿ ಪ್ರಕರಣ ಸಂಖ್ಯೆ 132/2018 ರ ಆದೇಶ ಪುಟದ ಅರ್ಜಿಯ ಹಾಗೂ ಸದರಿ ಪ್ರಕರಣದಲ್ಲಿ ಸಲ್ಲಿಸಿದ ಮೆಮೋದ ದೃಢಿಕೃತ ನಕಲುಗಳನ್ನು ನಿಡಿ.5 ರಿಂದ 7 ಎಂದು, ಸಿ.ಸಿ. 257/2021 ರ ಪಿರ್ಯಾದಿ ಮತ್ತು ಸದರಿ ಪ್ರಕರಣದಲ್ಲಿ ಆದ ತೀರ್ಪಿನ ದೃಢಿಕೃತ ನಕಲನ್ನು ನಿಡಿ.8 ಮತ್ತು 9 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ವಾದಿಯ ಪರ ಶ್ರೀ.ಬಿ.ಕೆ.ಎನ್ ವಕೀಲರಿಂದಃ</u>**

1. ನಿಮಗೆ ಎಷ್ಟು ವರ್ಷಗಳಿಂದ ವಾದಿಯ ಪರಿಚಯ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ವಾದಿಯ ಪರಿಚಯವೇ ಇಲ್ಲ ಎಂದು ನುಡಿದಿರುತ್ತಾರೆ. ಈ ದಾವೆ ಹೂಡಿದ ನಂತರದಲ್ಲಿ ವಾದಿ ಯಾರು ಮತ್ತು ಯಾವ ಊರಿನವರು ಎಂದು ತಿಳಿದುಕೊಂಡಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿಯು ಬಡಕನಕೊಪ್ಪಲು ಗ್ರಾಮದ ಊರಿನ ನಿವಾಸಿ ಎಂದು ನುಡಿದಿರುತ್ತಾರೆ.

2. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಪ್ರತಿವಾದ ಪತ್ರವನ್ನು ತಯಾರಿಸಲು ಬೋರಪ್ಪ ರವರು ಮಾಹಿತಿ ಕೊಟ್ಟಿರುತ್ತಾರೆ. ಸದರಿ ಬೋರಪ್ಪರವರು ನನ್ನ ಊರಿನವರು. ಸದರಿ ಬೋರಪ್ಪ ಮತ್ತು ನಾನು ಸಂಬಂಧಿಕರಲ್ಲ ಆದರೆ ಸ್ನೇಹಿತರು. ಈಗ 2-3 ವರ್ಷಗಳಿಂದ ನಾನು ಮತ್ತು ಸದರಿ ಬೋರಪ್ಪರವರು ಸ್ನೇಹಿತರಾಗಿರುತ್ತೇವೆ. ನಾನು ಮತ್ತು ಸದರಿ ಬೋರಪ್ಪ ನಾವಿಬ್ಬರು ಹಂಪಾಪುರ ಗ್ರಾಮದಲ್ಲಿಯೇ ಜನಿಸಿರುತ್ತೇವೆ ಎಂದರೆ ಸರಿ. ಮೊದಲಿನಿಂದಲೂ ನೀವು ಮತ್ತು ಸದರಿ ಬೋರಪ್ಪರವರು

ಒಳ್ಳೆಯ ಸ್ನೇಹಿತರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಇತ್ತೀಚೆಗೆ 2-3 ವರ್ಷಗಳಿಂದ ನಾನು ಮತ್ತು ಸದರಿ ಬೋರಪ್ಪರವರು ಸ್ನೇಹಿತರಾಗಿರುತ್ತೇವೆ ಎಂದು ನುಡಿದಿರುತ್ತಾರೆ.
3. ನಾನು ಮೀನಿನ ವ್ಯಾಪಾರ ಮಾಡುತ್ತೇನೆ. ಸುಮಾರು 20 ವರ್ಷಗಳಿಂದ ಬೋರಪ್ಪರವರು ಮೀನಿನ ವ್ಯಾಪಾರ ಮಾಡುತ್ತಾರೆ. ನನ್ನ ಮತ್ತು ಸದರಿ ಬೋರಪ್ಪರವರ ಮೀನಿನ ಅಂಗಡಿ ಅಕ್ಕ-ಪಕ್ಕದಲ್ಲಿರುತ್ತದೆ ಎಂದರೆ ಸರಿಯಲ್ಲ. ಹಂಪಾಪುರದಲ್ಲಿ ಮೀನಿನ ಮಾರಾಟಗಾರರ ಸಂಘ ಇಲ್ಲ ಆದರೆ ಮೀನಿನ ಬೇಟೆಗಾರರ ಸಂಘ ಇದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸದರಿ ಬೋರಪ್ಪರವರೇ ಹೇಳಿ ಬರೆಸಿರುತ್ತಾರೆ. ಬೋರಪ್ಪರವರು ನನಗೆ ಹೇಳಿಕೊಟ್ಟ ರೀತಿಯಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ವಾದಿಯು ಈ ದಾವೆಯನ್ನು ಹೂಡಿದ ವಿಷಯ ನನಗೆ ಈಗ 2 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನಾನು ವಾದಿಯೊಂದಿಗೆ ಯಾವುದೇ ವ್ಯವಹಾರ ಮಾಡದಿದ್ದರು ಸಹ ನನ್ನಿಂದ ಹಣ ವಸೂಲಿಗಾಗಿ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ. ವಾದಿಯು ಈ ದಾವೆಯನ್ನು ಹೂಡಿದ ನಂತರ ನಾನು ಅವರ ವಿರುದ್ಧ ಯಾವುದೇ ದೂರನ್ನು ಪೋಲಿಸ್ ಠಾಣೆಯಲ್ಲಿ ನೀಡಿರುವುದಿಲ್ಲ. ವಾದಿಯ ವಿರುದ್ಧ ದೂರನ್ನು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ವಾದಿಯಿಂದ ನಾನು ಸಾಲ ಪಡೆದಿದ್ದ ಕಾರಣ ನಾನು ಅವರ ವಿರುದ್ಧ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ದಿನಾಂಕ 02.02.2015 ರಂದು ನಾನು ವಾದಿಯಿಂದ 75,000/- ರೂಪಾಯಿ ಸಾಲವನ್ನು ಪಡೆದಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ವಾದಿಯ ಪರಿಚಯವಿಲ್ಲ ಹಾಗೂ ವಾದಿಯೊಂದಿಗೆ ನಾನು ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ಬದಲಾಗಿ ಮೇಲೆ ಹೇಳಿದ ಬೋರಪ್ಪರವರೊಂದಿಗೆ ನಾನು ಮಾಡಿದ್ದ ಹಣದ ವ್ಯವಹಾರಕ್ಕಾಗಿ ಬೋರಪ್ಪರವರಿಗೆ ಸಹಿ ಮಾಡಿದ ಛಾಪಾ ಕಾಗದವನ್ನು ಮತ್ತು ಚೆಕನ್ನು ಭದ್ರತೆಗಾಗಿ ಕೊಟ್ಟಿದ್ದೆ ಎಂದು ನುಡಿದಿರುತ್ತಾರೆ.

6. ನಿಪಿ.1 ರಲ್ಲಿರುವ ತಮ್ಮ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಮುಂದುವರೆದು ನಿಪಿ.1 ರಲ್ಲಿ ಬೋರನಾಯಕರು ನನ್ನ ಸಹಿಗಳನ್ನು ಪಡೆದಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ನಿಪಿ.1ರ ಛಾಪಾ ಕಾಗದವನ್ನು ಯಾರ ಹೆಸರಿನಲ್ಲಿ ಖರೀದಿಸಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಪಿ.1ರ ಛಾಪಾ ಕಾಗದವನ್ನು ಬೋರನಾಯಕರು ತಂದಿದ್ದರು ಎಂದು ನುಡಿದಿರುತ್ತಾರೆ. ನಿಪಿ.1ರ ಛಾಪಾ

ಕಾಗದವನ್ನು ನಾನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಛಾಪಾ ಕಾಗದವನ್ನು ಬೋರನಾಯಕರು ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

7. ಈಗ 3 ವರ್ಷಗಳ ಹಿಂದೆ ನನ್ನ ಮತ್ತು ಬೋರನಾಯಕರ ಮಧ್ಯೆ ಹಣದ ವ್ಯವಹಾರವಾಗಿತ್ತು. ಸದರಿ ಹಣದ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಬೋರನಾಯಕರ ಮಧ್ಯೆ ಬೇರೆ ಯಾವುದೇ ಹಣದ ವ್ಯವಹಾರವಾಗಿರುವುದಿಲ್ಲ. 3 ವರ್ಷಗಳ ಹಿಂದೆ ನನ್ನ ಮತ್ತು ಬೋರನಾಯಕರ ಮಧ್ಯೆ ಆದ ಹಣದ ವ್ಯವಹಾರದ ಕಾಲಕ್ಕೆ ನಾನು ನನ್ನ ಸಹಿ ಮಾಡಿದ ಛಾಪಾ ಕಾಗದ ಮತ್ತು ಚೆಕ್ಕನ್ನು ಬೋರನಾಯಕರಿಗೆ ಕೊಟ್ಟಿರುತ್ತೇನೆ.

8. ನಿಪಿ.1 ರ ಛಾಪಾ ಕಾಗದವನ್ನು ನಾನೇ ಸ್ವತಃ ಹಣವನ್ನು ಕೊಟ್ಟು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ ದಾಖಲೆಯನ್ನು ಪತ್ರ ಬರಹಗಾರರಾದ ಶಿವಕುಮಾರ ರವರು ತಯಾರಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಾನು ನಿಪಿ.1 ರ ಸಾಕ್ಷಿದಾರರ ಸಮಕ್ಷಮದಲ್ಲಿ ವಾದಿಯಿಂದ ಸಾಲವನ್ನು ಪಡೆದು ನಿಪಿ.1 ಕ್ಕೆ ನನ್ನ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

9. ಅಸಲು ದಾವೆ ಸಂಖ್ಯೆ 198/2018 ರ ದಾವೆಯು ಬೋರಪ್ಪರವರಿಗೆ ಸಂಬಂಧಪಟ್ಟ ದಾವೆಯಾಗಿರುತ್ತದೆ. ಅಸಲು ದಾವೆ ಸಂಖ್ಯೆ 198/2018 ರ ದಾವೆಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಕೇವಲ ಬೋರನಾಯಕರೊಂದಿಗೆ ಹಣದ ವ್ಯವಹಾರ ಮಾಡಿದ್ದು ಅವರಿಗೆ ಕೊಡಬೇಕಾದ ಸಂಪೂರ್ಣ ಹಣವನ್ನು ಸಂದಾಯ ಮಾಡಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

10. ಈ ದಾವೆಯ ವಾದಿಯು ಸದರಿ ಬೋರನಾಯಕರವರ ವಿರುದ್ಧ ಹಣ ವಸೂಲಿಗಾಗಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಹಣದ ಅವಶ್ಯಕತೆಗಾಗಿ ನಾನು ವಾದಿಯಿಂದ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ರ ನೋಟಿಸು ನನಗೆ ತಲುಪಿರುತ್ತದೆ ಎಂದರೆ ಸರಿ. ನಿಪಿ.2 ರ ನೋಟಿಸು ನನಗೆ ತಲುಪಿದ ನಂತರ ನಾನು ಅದನ್ನು ಬೋರನಾಯಕರಿಗೆ ತೋರಿಸಿ ನಾನು ನಿಮಗೆ ಕೊಡಬೇಕಾದ ಎಲ್ಲಾ ಹಣವನ್ನು ಸಂಪೂರ್ಣವಾಗಿ ಸಂದಾಯ ಮಾಡಿದ್ದರು ಯಾಕೆ ನನಗೆ ನೋಟಿಸು ಬಂದಿರುತ್ತದೆ

ಎಂದು ನಾನು ಬೋರನಾಯಕರಲ್ಲಿ ಕೇಳಿದಾಗ ನಿಪಿ.2 ರ ನೋಟಿಸನ್ನು ಬೋರನಾಯಕರು ನನ್ನಿಂದ ಪಡೆದು ತಾವು ವಾದಿಯಲ್ಲಿ ಮಾತನಾಡಿ ಬಗೆಹರಿಸುದಾಗಿ ನನ್ನಲ್ಲಿ ಬೋರನಾಯಕರು ಹೇಳಿರುತ್ತಾರೆ.

11. ನನಗೆ ಈ ದಾವೆಯ ವಿಷಯ ಗೊತ್ತಾದ ಬಳಿಕ ಬೋರನಾಯಕರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ನನಗೆ ಬೋರನಾಯಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**